O.S.No. 207/2007 P W - 1

ದಿನಾಂಕ 14.07.2022 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ. A R K. ವಕೀಲರಿಂದ :

ನಮ್ಮ ತಂದೆ ಮತ್ತು ನಮ್ಮ ದೊಡ್ಡಪ್ಪ ಸೇರಿ ಸ.ನಂ 80 ರಲ್ಲಿ 2 ಎಕರೆ 20 ಗುಂಟೆ ಜಮೀನು ಅನ್ನು ದಾಸಯ್ಯನ ಮಗ ತಿಮ್ಮಯ್ಯನಿಗೆ ಮಾರಾಟ ಮಾಡಿರುತ್ತಾರೆ. ಸ.ನಂ 80 ರ ಚಕ್ಕುಬಂಧಿ ಪೂರ್ವಕೆ ಸಿದ್ದೇಗೌಡರ ಜಮೀನು, ಇವಾಗ ಪ್ರಸ್ತುತ ನಾರಾಯಣಪ್ಪ ಜಮೀನು, ಪಶ್ಚಿಮಕ್ಕೆ ನಮ್ಮದೇ ಜಮೀನು, ಉತ್ತರಕ್ಕೆ ನಂಜಪ್ಪರವರ ಜಮೀನು, ದಕ್ಷಿಣಕ್ಕೆ ಚಿನ್ನಗಿರಯ್ಯ ಜಮೀನು, ನಾನು ಸುಳ್ಳು ಚಕ್ಕುಬಂಧಿಯನ್ನು ಹೇಳುತ್ತಿದ್ದೆನೆ ಅಂದರೆ ಸರಿಯಲ್ಲ. ನನಗೆ ಹೊನ್ನಮ್ಮ ಎಂಬ ತಂಗಿ ಇದ್ದಾರೆ, ಹೊನ್ನಮ್ಮ ರವರನ್ನು ಈ ದಾವೆಯಲ್ಲಿ ಪಕ್ಷಕಾರರನ್ನು ಮಾಡಿಲ್ಲ ಅಂದರೆ ಸರಿ, ದಾವೆಯನ್ನು ದಾಖಲಿಸುವ ಸಮಯದಲ್ಲಿ ವಂಶವೃಕ್ಷವನ್ನು ಹಾಜರುಪಡಿಸಿಲ್ಲ, ನನಗೆ ಮತ್ತು ನನ್ನ ಅಣ್ಣನ ಮಕ್ಕಳಿಗೆ ಬೇರೆ ಬೇರೆ ಜಮೀನು ಇದೆ ಅಂದರೆ ಸರಿ. ನಿಪಿ 1 ದಾವ ಸ್ವತ್ತಿಗೆ ಸಂಬಂದಪಟ್ಟಿದು ಅಂದರೆ ಸರಿಯಲ್ಲ. ಸೊಂಟೆನಹಳ್ಳಿ ತಿಮ್ಮಯ್ಯ ನನಗೆ ಗೊತ್ತಿಲ್ಲ. ಸದರಿ ದಾವ ಸ್ವತ್ತಿನ ಬಗ್ಗೆ ಮೂಲ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಅಂದರೆ ಸರಿಯಲ್ಲ. ನನ್ನ ಹಕ್ಕಿನ ಬಗ್ಗೆ ಇರುವಂತಹ ದಾಖಲೆಗಳನ್ನು ಹಾಜರುಪಡಿಸಿಲ್ಲ. ನಿಪಿ 24 ರಂತೆ ಕಂದಾಯವನ್ನು ಪ್ರತಿವಾದಿಯವರ ಆಸ್ತಿಗೆ ಕಂದಾಯ ಪಾವತಿಸಿರುತ್ತೇನೆ ಅಂದರೆ ಸರಿಯಲ್ಲ, ನಿಪಿ 23 ರಂತೆ ನಮ್ಮ ತಂದೆ ವಾದಿಯ ಮಾವ ತಿಮ್ಮಯ್ಯನಿಗೆ ಮಾರಾಟ ಮಾಡಿದ್ದಾರೆ ಅಂದರೆ ಸರಿಯಲ್ಲ, ಸ.ನಂ 81 ವಿಸ್ತೀರ್ಣಕ್ಕೆ 27 ಗುಂಟೆಗೆ ಚಕ್ಕು ಬಂಧಿ ಪಶ್ಚಿಮಕ್ಕೆ ವಾದಿಯ ಮಾವ ತಿಮಯ್ಯನಿಗೆ ಸೇರಿದ ಜಮೀನು ಎಂದು ನಮೂದು ಆಗಿರುತ್ತದೆ ಅಂದರೆ ಸರಿಯಲ್ಲ, ದಾವ ಸ್ವತ್ತು ನನಗೆ ಸೇರಿದೆ ಎಂದು ನಾನು ನ್ಯಾಯಾಲಯಕ್ಕೆ ದಾಖಲೆಯನ್ನು ಹಾಜರುಪಡಿಸಿದ್ದೇನೆ, ನಾನು ಕಂದಾಯ

ದಾಖಲೆಗಳನ್ನು ಹೊರತು ಪಡಿಸಿ ಬೇರೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ

ನಾನು ದಾವೆಯನ್ನು ಸಲ್ಲಿಸುವ ಮೊದಲು, ಮರಿಯಮ್ಮ ಎಂಬುವವರು ನನ್ನ ಮತ್ತು ನನ್ನ ಅಣ್ಣನ ವಿರುದ್ದ Permanent Injunction ದಾವೆ ಸಲ್ಲಿಸಿರುತ್ತಾರೆ ಅಂದರೆ ಸರಿ. ಮರಿಯಮ್ಮರವರು ದಾವೆ ಸಲ್ಲಿಸಿದ ನಂತರ ದಾವೆಯನ್ನು ಸಲ್ಲಿಸಿದ್ದೇವೆ ಅಂದರೆ ಸರಿಯಲ್ಲ. ದಾವ ಸ್ವತಿಗೆ ಸಂಬಂಧಪಟ್ಟಂತೆ ಮರಿಯಮ್ಮ ಎಂಬುವವರು ಹಕ್ಕು ಮತ್ತು ಸ್ವಾಧೀನವನ್ನು ತೋರಿಸಲು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆ ಅಂದರೆ ಸಾಕ್ಷಿಯೂ ನಾವು ಸಹ ದಾಖಲೆಗಳನು ಹಾಜರುಪಡಿಸಿರುತ್ತೇವೆ ಎಂದು ನುಡಿಯುತ್ತಾರೆ. ಮರಿಯಮ್ಮ ರವರು ದಾವ ಸ್ವತಿನಲ್ಲಿ ಸ್ವಾಧೀನದಲ್ಲಿದ್ದು ನಾವು ತೊಂದರೆ ಕೊಡುತ್ತಿದ್ದವೆ ಅಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಮರಿಯಮ್ಮ ರವರು ಮೆದ್ದೆಗೆ / ಹುಲ್ಲುಗೆ ಅವರೇ ಬೆಂಕಿ ಹಚ್ಚಿ ಅವರೇ ಪೊಲೀಸರಿಗೆ ದೂರನ್ನು ನೀಡಿದ ನಂತರ ನಾವು ಸ್ವಾಧೀನವನ್ನು ಹೆದರಿಕೊಂಡು ಮರಿಯಮ್ಮನಿಗೆ ಬಿಟ್ಟುಕೊಟ್ಟಿರುತ್ತೇವೆ . ದಾವಾಸ್ವತಿನಲ್ಲಿ ನಮಗೆ ಹಕ್ಕು ಇಲ್ಲ ಅಂದರೆ ಸರಿಯಲ್ಲ ಪ್ರತಿವಾದಿಯವರೇ ದಾವಾಸ್ವತಿನ ಸ್ವಾಧೀನದಲ್ಲಿ ಇದ್ದರೆ ಅಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಓ

ಎರಡನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಕನಕಪುರ